ಮಾಡುತ್ತಾರೆ, ಜಿಲ್ಲಾ ಪಂಚಾಯಿತಿ ರಸ್ತೆ ಯಾವ ರೀತಿ ಮೇಂಟೇನ್ ಮಾಡುತ್ತಾರೆ ಅದೇ ರೀತಿ ಮೀನುಗಾರಿಕಾ ರಸ್ತೆಗೆ ಏಕೆ ಹಣ ಬಿಡುಗಡೆ ಮಾಡಲಿಲ್ಲವೆಂದು ಕೇಳಿದೆ.

ಅಧ್ಯಕ್ಷರು : ಅದಕ್ಕೆ ಸೆಪರೇಟ್ ಪ್ರಶ್ನೆ ಕೇಳಿ ಎಂದು ಹೇಳಿದ ಮೇಲೆ ಮತ್ತೆ ಏಕೆ ಕೇಳುತ್ತೀರಿ?

ಶ್ರೀ ಎನ್.ಯೋಗೀಶ್ ಭಟ್ : ನಾನು ಒಂದು ಪಾಯಿಂಟ್ ರೈಸ್ ಮಾಡಿದ್ದೇನೆ. ಮೀನುಗಾರಿಕಾ ಇಲಾಖೆಯಲ್ಲಿ ಕಾಮಗಾರಿ ಆಗಬೇಕಾಗಿದ್ದರೆ ನೊಂದ ಜನರು ಮಾನ್ಯ ಮೀನುಗಾರಿಕಾ ಸಚಿವರ ಕಾಲು ಹಿಡಿಯುವ ಒಂದು ಆದೇಶ ಮಾಡಿದ್ದಾರೆಂದು ಸಾರ್ವಜನಿಕವಾಗಿ ಪ್ರಕಟವಾಗಿದೆ. ಇದರ ಬಗ್ಗೆ ಅವರು ಉತ್ತರ ಕೊಡಬೇಕು. ಇದು ಉದಯ ಟೀವಿಯಿಂದ ಹಿಡಿದು ಎಲ್ಲದರಲ್ಲಿ ಬಂದಿದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ರಾಜಕೀಯ ಮಾತನಾಡಿದರೆ ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಅನೇಕ ಸಚಿವರು ಬರುತ್ತಾರೆ, ಹೋಗುತ್ತಾರೆ. ನಾವು ಅದೇ ತರಹ ಉತ್ತರ ಕೊಡಬೇಕಾಗುತ್ತದೆ?

(ಗೊಂದಲ)

Mr. Speaker : You have no right to answer. The minister is there to reply.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಇದು ಪ್ರಥಮ ಬಾರಿ ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನಮ್ಮ ರಾಜ್ಯದಲ್ಲಿ ಮೂರು ವರ್ಷಗಳಲ್ಲಿ 700 ಲಕ್ಷ ರೂಪಾಯಿ ಖರ್ಚು ಮಾಡಿ ಮಾಡಿದ ಕಾಮಗಾರಿ ಇವತ್ತು ಯಾವುದೇ ಸರ್ಕಾರ ಮಾಡಿಲ್ಲ. ಅದಕ್ಕೆ ತಾವು ಪ್ರಶಂಸೆ ಮಾಡಬೇಕಾಗಿದೆ. ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳೂ ನಮಗೆ ಸಂಪೂರ್ಣವಾದ ಸಹಕಾರ ಕೊಟ್ಟು 700 ಲಕ್ಷ ರೂಪಾಯಿ ಖರ್ಚು ಮಾಡಿ ಕಾಮಗಾರಿ ಮುಗಿಸಿದ್ದಾರೆ. ರಸ್ತೆ ರಿಪೇರಿ ಬಗ್ಗೆ ಮಾನ್ಯ ಗೋಪಾಲ ಪೂಜಾರಿಯವರು ಹೇಳಿದ್ದಾರೆ. ಇದನ್ನು ನಾನು ನನ್ನ ಇಲಾಖೆಯವರ ಜೊತೆ ಚರ್ಚೆ ಮಾಡಿ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟು, ಮಾನ್ಯ ಮುಖ್ಯಮಂತ್ರಿಗಳಿಗೂ ಪ್ರಸ್ತಾವನೆ ಕಳುಹಿಸಿ ಅಡಿಷನಲ್ ಫಂಡ್ ಕೇಳಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಸದನದ ರೆಕಾರ್ಡ್‌ಗೆ ತಪ್ಪು ಮಾಹಿತಿ ಹೋಗಬಾರದು. ಇಷ್ಟೊಂದು ಹಣ ಸ್ಯಾಂಕ್ಷನ್ ಆಗಿದೆ ಎಂದು ಹೇಳಿ ಮೀನುಗಾರಿಕಾ ರಸ್ತೆ ದುರಸ್ತಿಗೆ ಇದುವರೆಗೆ ಹಣ ಕೊಟ್ಟಿಲ್ಲ.

Mr. Speaker : I can't allow. Still 10 questions are there.

ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಸೇವಾ ಸಹಕಾರಿ ಸೊಸೈಟಿಗಳಲ್ಲಿರುವ ದಾಸ್ತಾನು ಬಗ್ಗೆ

466(4170) ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಸೇವಾ ಸಹಕಾರಿ ಸೊಸೈಟಿಗಳಲ್ಲಿರುವ ಒಟ್ಟು ದಾಸ್ತಾನು ಬಟ್ಟೆಗಳ ಮೊತ್ತವೆಷ್ಟು; ಅವುಗಳ ತೀರುವಳಿಗಾಗಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು;

ಆ) ಆಸ್ಪತ್ರೆಗಳಿಗೆ, ಹಾಸ್ಟೆಲ್‌ಗಳಿಗೆ ಮತ್ತಿತರ ಸೂಕ್ತ ಕಡೆಗಳಿಗೆ ದಾಸ್ತಾನು ಬಟ್ಟೆಗಳನ್ನು ಖರೀದಿಸಲು ಸರ್ಕಾರ ಕ್ರಮ ಜರುಗಿಸುವರೆ;

ಇ) ಸಬ್ಸಿಡಿ ನೀಡುವ ಯೋಜನೆ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ದಿನಾಂಕ: 30-6-2003 ರಂದು ಇದ್ದ ಬಟ್ಟೆಗಳ ದಾಸ್ತಾನು ಮೊತ್ತ ರೂ. 411.52 ಲಕ್ಷಗಳು. 2002-03ನೇ ಸಾಲಿನಲ್ಲಿ ರೂ. 25.00 ಲಕ್ಷಗಳನ್ನು ಶೇಕಡ 10 ವಿಶೇಷ ರಿಬೇಟ್‌ಗಾಗಿ ರಾಜ್ಯ ಸರ್ಕಾರ ಮಂಜೂರು ಮಾಡಿರುತ್ತದೆ. ರೂ. 195.79 ಲಕ್ಷಗಳ ಮೊತ್ತದ ಬಟ್ಟೆಗಳನ್ನು ಮಾರಾಟ ಮಾಡಲು ರೂ. 19.57 ಲಕ್ಷಗಳನ್ನು ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ದಾಸ್ತಾನನ್ನು ಮಾರಾಟ ಮಾಡುವ ಕುರಿತಂತೆ 2003-04ನೇ ಸಾಲಿಗೆ ರೂ. 30.00 ಲಕ್ಷಗಳ ಆಯವ್ಯಯ ಒದಗಿಸಿಕೊಳ್ಳಲಾಗಿದೆ. ಅದಲ್ಲದೇ ದೀನದಯಾಳ್ ಹತ್‌ಕರ್ಗಾ ಪ್ರೋತ್ಸಾಹಧನ ಯೋಜನೆಯಡಿ 2002-03ನೇ ಸಾಲಿನಲ್ಲಿ ಒಟ್ಟು ರೂ. 45.32 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ. 469.55 ಲಕ್ಷ ಮೊತ್ತದ ಬಟ್ಟೆ ಮಾರಾಟ ಮಾಡಲಾಗಿರುತ್ತದೆ. 2003-04 ನೇ ಸಾಲಿಗೆ ರೂ. 200.00 ಲಕ್ಷಗಳ (ಕೇಂದ್ರ + ರಾಜ್ಯ) ಆಯವ್ಯಯ ಒದಗಿಸಿಕೊಳ್ಳಲಾಗಿದೆ.

ಆ) ಸರ್ಕಾರಿ ಇಲಾಖೆಗಳು ಸ್ವಾಯತ್ತ ಸಂಸ್ಥೆಗಳು ಕಂಪನಿ/ನಿಗಮ/ಮಂಡಳಿ ಸ್ಥಳೀಯ ಸಂಸ್ಥೆಗಳು ತಮ್ಮ ಅವಶ್ಯಕ ಬಟ್ಟೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡ್‌ಲೂಮ್ಸ್, ಕೈಮಗ್ಗ ಸಹಕಾರಿ ಸಂಘಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾಮಂಡಳಿ ಮತ್ತು ಜನತಾ ಬಜಾರ್‌ಗಳಿಂದ ಖರೀದಿಸಿ ಪೂರೈಸಿ ಕೊಳ್ಳಬೇಕೆಂದು ಈ ಕೆಳಕಾಣಿಸಿದ ಸುತ್ತೋಲೆಗಳನ್ನು ಹೊರಡಿಸಲಾಗಿದೆ.

1. ವಾಕೈ 167 ಜಿಕೈಇ 97, ದಿನಾಂಕ: 18.7.1998
2. ವಾಕೈ 90 ಜಿಕೈಇ 1999, ದಿನಾಂಕ: 25.5.2001
3. ವಾಕೈ 9 ಜಿಕೈಮ 2002, ದಿನಾಂಕ: 20.8.2002

ಇ) ಕೈಮಗ್ಗ ಉತ್ಪನ್ನಗಳಿಗೆ ಸಬ್ಸಿಡಿ ನೀಡುವ ಯೋಜನೆ ಜಾರಿಯಲ್ಲಿರುವುದಿಲ್ಲ.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಹಾಗೆ ರಾಜ್ಯದ ನೇಕಾರರೂ ಕೂಡ ದುಸ್ಥಿತಿಯಲ್ಲಿದ್ದಾರೆ. ಹಾಗಾಗಿ ಅವರು ಕೊಟ್ಟಿರುವ ಉತ್ತರದಲ್ಲಿ 30.6.03ಕ್ಕೆ 4411.52 ಲಕ್ಷ ರೂ. ದಾಸ್ತಾನು ಇದೆ ಎಂದು ಹೇಳಿದ್ದಾರೆ. ಅವರು ಮತ್ತೊಂದು ಉತ್ತರದಲ್ಲಿ 2002-03ನೇ ಸಾಲಿಗೆ 45.32 ಲಕ್ಷ ರೂಪಾಯಿ ಬಿಡುಗಡೆ ಮಾಡಿ 469.55 ಲಕ್ಷ ರೂ. ಮೊತ್ತದ ಬಟ್ಟೆಯನ್ನು ಮಾರಾಟ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಅವರಲ್ಲಿ ಇರುವ ದಾಸ್ತಾನಿಗೆ ಹೆಚ್ಚಿನ ಮೊತ್ತದ ಬಟ್ಟೆ ಮಾರಾಟ ಮಾಡಿದ್ದಾಗಿ ಕಾಣುತ್ತಿದೆ. ಇದರ ಜೊತೆಗೆ ಈಗಲೂ ಕೂಡ ನೇಕಾರರು ತುಂಬ ಸಂಕಷ್ಟದಲ್ಲಿರುವುದರಿಂದ ಅವರಲ್ಲಿರುವ ದಾಸ್ತಾನು ಇಲಾಖೆಯ ಮೂಲಕ ಅಥವಾ ಬೇರೆ ಬೇರೆ ಸಂಸ್ಥೆಗಳ ಮೂಲಕ ಅದನ್ನು ಮಾರಾಟ ಮಾಡಿ ಅವರಿಗೆ ನೇಕಾರರಿಗೆ ಆದ್ಯತೆ ಕೊಟ್ಟು ಅವರ ಮಾಲುಗಳನ್ನು ಹೆಚ್ಚು ಮಾರಾಟ ಆಗುವ ಹಾಗೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 1.6.03ಕ್ಕೆ ಬಟ್ಟೆಗಳ ದಾಸ್ತಾನು 411.52 ಲಕ್ಷ ರೂ. ಇತ್ತು ಎಂದು ತಿಳಿಸಿದ್ದೇನೆ. ಜೊತೆಗೆ ದಾಸ್ತಾನಿನಲ್ಲಿ 25 ಪರ್ಸೆಂಟ್, 20 ಪರ್ಸೆಂಟ್ ರಿಬೇಟ್ ಕೊಡಬೇಕೆನ್ನುವ ದೃಷ್ಟಿಯಿಂದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಡಿಯಲ್ಲಿ ಅನೌನ್ಸ್ ಮಾಡಿದ್ದೇವೆ. ನಾನು ರಾಜ್ಯವನ್ನು ಸುತ್ತಿದ ಸಂದರ್ಭದಲ್ಲಿ, ಉಡುಪಿ ಜಿಲ್ಲೆಗೆ ನಾನು ಹೋದ

ಸಂದರ್ಭದಲ್ಲಿ ಎಂಟು ಸಹಕಾರಿ ಸೊಸೈಟಿಗಳಲ್ಲಿ ದಾಸ್ತಾನು ನೋಡಿದ ಮೇಲೆ ಮುಖ್ಯಮಂತ್ರಿಗಳ ಜೊತೆ ನಾನು ಚರ್ಚೆ ಮಾಡಿ 1998ರಲ್ಲಿ ಬಿಡುಗಡೆ ಆದಮೇಲೆ ಪ್ರಥಮ ಬಾರಿ ಈ ಸಾರಿ ಬಿಡುಗಡೆ ಮಾಡಿಸಿದ್ದೇನೆ. ಜೊತೆಗೆ ಈ ಹಣ ಇವತ್ತು ರಾಜ್ಯಾದ್ಯಂತ ಸಹಕಾರಿ ಸಂಘಗಳು ಕ್ಯಾಪಿಟಲ್ ಆಗಿ ಕನ್‌ವರ್ಟ್ ಮಾಡಿಕೊಂಡಿವೆ. ನನ್ನ ಅನಿಸಿಕೆ ಪ್ರಕಾರ ಪೂರ್ಣ ಪ್ರಮಾಣದಲ್ಲಿ ಸಹಕಾರಿ ಸಂಘಗಳು ಸರ್ಕಾರದ ಮೇಲೆ ಅವಲಂಬಿತರಾಗುವುದು ಸರಿಯಲ್ಲ. ಅವರು ಮಾರುಕಟ್ಟೆ ಫ್ರೀಯಾಗಿ ಮಾಡಿಕೊಳ್ಳಬೇಕು. ದಾಸ್ತಾನು ಕ್ಲಿಯರ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲಿ ಒಂದು ಹಂತದಲ್ಲಿ ಅದು ಉಳಿದಿದ್ದು ಅವರ ಕಷ್ಟವನ್ನು ನಿವಾರಿಸುವುದಕ್ಕೆ ನಾವು ಮಧ್ಯಸ್ತಿಕೆ ವಹಿಸಿದ್ದೇವೆಯೇ ಹೊರತು ಪೂರ್ಣ ಪ್ರಮಾಣದಲ್ಲಿ ನೇಕಾರರ ಸಂಘದ ಬಟ್ಟೆಯನ್ನು ನಾವೇ ವಿಲೇವಾರಿ ಮಾಡುವುದು ಇದು ಸರ್ಕಾರದ ಕೆಲಸ ಅಲ್ಲ. ಆದರೂ ಕೂಡ ನೇಕಾರರ ತೊಂದರೆ ಗಮನಿಸಿ ನಾವು 10 ಪರ್ಸೆಂಟ್ ರಿಬೇಟ್ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದ ರಿಬೇಟ್ ನಮಗೆ ಇನ್ನೂ ಬರಬೇಕಾಗಿದೆ. ಈ ದೃಷ್ಟಿಯಲ್ಲಿ ಮಾನ್ಯ ಬಂಗೇರ ಅವರ ಕಾಳಜಿಯನ್ನು ನಾನು ಗಮನಿಸಿದ್ದೇನೆ. ಸರ್ಕಾರ ನೇಕಾರರ ಪರವಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ತಾವು 2000 ಲಿವಿಂಗ್ ಕಮ್ ವರ್ಕ್ ಶೆಡ್ಸ್ ಕನ್‌ಸ್ಟ್ರಕ್ಟ್ ಮಾಡುತ್ತೇವೆ. 2003–04ನೇ ಸಾಲಿನಲ್ಲಿ ಮತ್ತು ಇದಕ್ಕಾಗಿ 2 ಕೋಟಿ ರೂಪಾಯಿ ಹಣವನ್ನು ಮೀಸಲಿಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ ತಾವು ಇದುವರೆಗೆ ಎಷ್ಟು ಶೆಡ್‌ಗಳನ್ನು ಕಟ್ಟುವುದಕ್ಕೆ ಸಹಕಾರ ನೀಡಿದ್ದೀರಿ, ಎಷ್ಟು ಖರ್ಚು ಮಾಡಿದ್ದೀರಿ ಎಂದು ಇನ್ನೊಂದು ಬೆಂಗಳೂರಿನ ಹೊರ ವಲಯದಲ್ಲಿ ನೇಕಾರರಿಗೆ ಒಂದು ಬಡಾವಣೆಯನ್ನು ನಿರ್ಮಾಣ ಮಾಡಿ ಸಬ್ಸಿಡೈಸ್ಡ್ ರೇಟ್‌ನಲ್ಲಿ ಅವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದಿರಿ, ಅದರ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಸಭಾಧ್ಯಕ್ಷರೆ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರ ಪ್ರಶ್ನೆ ಇದಕ್ಕೆ ಸಂಬಂಧ ಇಲ್ಲದಿದ್ದರೂ ಕೂಡ ಸರ್ಕಾರ ಚಿಂತನೆ ಇದೆ. ನಾವು ಈ ಸಾರಿ ಬಜೆಟ್‌ನಲ್ಲಿ ಅನೌನ್ಸ್ ಮಾಡಿರುವುದು 2000 ಮನೆಗಳನ್ನೂ, ಲಿವಿಂಗ್ ಕಮ್ ವರ್ಕ್ ಶೆಡ್ ಕೊಡಬೇಕೆಂದು ತೀರ್ಮಾನವಾಗಿದೆ. ನಾವು ಜಿಲ್ಲಾವಾರು ಅವರು ನಿಗದಿಪಡಿಸಿ ಗುರಿಯನ್ನು ಕೊಟ್ಟಿದ್ದೇವೆ. ನಮ್ಮ ಇಲಾಖೆಯ ವತಿಯಿಂದ ತರಿಸಿಕೊಡುತ್ತಿದ್ದೇವೆ. ಹಣವನ್ನು ಜಿಲ್ಲಾವಾರು ಮಂಜೂರು ಮಾಡಿದ್ದೇವೆ. ವರ್ಕ್ ಪ್ರಾರಂಭವಾಗುತ್ತಿದೆ. ಬೆಂಗಳೂರಿನ ನೇಕಾರರಿಗೂ ಕೂಡ ಆದ್ಯತೆ ಕೊಡುತ್ತೇವೆ.

ಅಧ್ಯಕ್ಷರು : ಈ ಪ್ರಶ್ನೆಗೆ ಸಂಬಂಧ ಇಲ್ಲವೆಂದು ಹೇಳಿದರೆ ಉತ್ತರ ಕೊಡಬಾರದು. ಸುಮ್ಮನೆ ಕೂರಬೇಕು. ಉತ್ತರ ಹೇಳಿದರೆ ಅವರು ಮತ್ತೆ ಪ್ರಶ್ನೆ ಕೇಳುತ್ತಾರೆ. ಒಂದು ಸಾರಿ ಮಂತ್ರಿಗಳು ಹೇಳಿದ ಮೇಲೆ ಆಯಿತು.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇವತ್ತು ನೇಕಾರರು ಬಹಳ ಕಷ್ಟದಲ್ಲಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. 30.6.03ಕ್ಕೆ 411 ಲಕ್ಷ ರೂಪಾಯಿ ದಾಸ್ತಾನು ಇರುವುದು ಸರಿಯಷ್ಟೆ. ಅದಕ್ಕೆ ರಿಬೇಟ್ ಕೊಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಜೊತೆಗೆ ಈ ಸರ್ಕಾರ ಮತ್ತು ನಿಗಮ ಮಂಡಳಿಗಳು ಸ್ವಾಯತ್ತ ಸಂಸ್ಥೆಗಳು ಈ ಬಟ್ಟೆಗಳನ್ನು ಪರ್ಚೇಸ್ ಮಾಡಬಹುದು ಎಂದು ಸರ್ಕಾರದ ಸುತ್ತೋಲೆ ಇದೆ. ಬರೀ ಸುತ್ತೋಲೆಗಳನ್ನು ಹೊರಡಿಸಿದರೆ ಸಾಲದು, ಎಷ್ಟು ಪ್ರಮಾಣದಲ್ಲಿ ಈ ಇಲಾಖೆಗಳು ಸರ್ಕಾರದ ವತಿಯಿಂದ ನಿಗಮ ಮಂಡಳಿಗಳೂ ಕೆಲಸ ಮಾಡುತ್ತಿವೆ ಅದು ಮುಖ್ಯ. ಅದರ ಬಗ್ಗೆ ಏನು ಪ್ರೋಗ್ರೆಸ್ ಆಗಿದೆ ಎಂಬುದನ್ನು ತಿಳಿಸಬೇಕು.

12.10 ಪಿಎಂ

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ಸಹಕಾರಿ ಕ್ಷೇತ್ರದಲ್ಲಿರತಕ್ಕಂಥ ನೇಕಾರು ಅವರು ತಯಾರು ಮಾಡಿದ ಬಟ್ಟೆಗಳಿಗೆ ಮಾರ್ಕೆಟಿಂಗ್‌ನ್ನು ಅವರೇ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದ್ದೇವೆ. ಇದರ ಜೊತೆಗೆ ನಾವು ನೇಕಾರರ ಸಂಕಷ್ಟಗಳನ್ನು ಒಪ್ಪಿಕೊಂಡು ಸರ್ಕಾರ ಬೇರೆ ಇಲಾಖೆಗಳೂ ಕೂಡ ಕೊಂಡುಕೊಳ್ಳಬೇಕೆಂದು ನಾವು ಸರ್ಕ್ಯುಲರ್ ಮುಖಾಂತರ ತಿಳಿಸಿದ್ದೇವೆ. ಆದರೆ ಟ್ರಾನ್ಸ್‌ಫರ್‌ನ್ಸಿ ಆ್ಯಕ್ಟ್ ಪ್ರಕಾರ ಕಾಂಪಿಟಿಟಿವ್ ರೇಟ್‌ನಲ್ಲಿ ನಾವು ಕೊಂಡುಕೊಳ್ಳಬೇಕಾಗುತ್ತದೆ. ಇದು ಒಂದು ವಿಚಾರ. ಎರಡನೆಯದಾಗಿ ಅವರು ತಯಾರು ಮಾಡಿದಂಥವುಗಳ ಗುಣಮಟ್ಟ ಸರಿಯಾಗಿ ಇದಕ್ಕೂ ಅದಕ್ಕೂ ಹೊಂದಾಣಿಕೆಯಾಗದೇ ಇದ್ದರೆ ಬೇರೆ ಇಲಾಖೆಯವರು ತೆಗೆದುಕೊಳ್ಳುತ್ತಿಲ್ಲ. ಒಂದು ಮಾತು ಹೇಳುವುದೇನೆಂದರೆ ಈ ಸುತ್ತೋಲೆಗಿಂತಲೂ ಸರ್ಕಾರ ಕಠಿಣಬದ್ಧವಾಗಿ ಏನು ಇವೊತ್ತು ವಿದ್ಯಾ ವಿಕಾಸ ಯೋಜನೆಗೆ ಕೆ.ಹೆಚ್.ಡಿ.ಸಿ.ಗೆ ನಿಗದಿತವಾಗಿ ಕೊಡತಕ್ಕಂಥ ಆರ್ಡರ್ ಏನಿದೆ ಅದೇ ರೀತಿ, ಆರೋಗ್ಯ ಇಲಾಖೆ ಮತ್ತು ಇನ್ನಿತರ ಇಲಾಖೆಯವರಿಗೆ ತಿಳಿಸುವ ಬಗ್ಗೆ ನಾವು ಸರ್ಕಾರದ ಮಟ್ಟದಲ್ಲಿ ಚಿಂತನೆಯನ್ನು ಮಾಡಿ ಅದಕ್ಕೆ ಒಂದು ನಿಲುವನ್ನು ಕೊಟ್ಟಾಗ, ನಾವು ಇದನ್ನು ಸರ್ಕಾರಿ ಕಾರ್ಯಕ್ರಮವಾಗಿ ನಿರೂಪಣೆಯನ್ನು ಮಾಡಿದಾಗ ಮಾತ್ರ ಇದಕ್ಕೆ ಸಹಾಯವಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಸಚಿವರು ಹೇಳಿರುವುದು ಬಹಳ ರೆಲೆವೆಂಟ್ ಇದೆ. ಕೆ.ಹೆಚ್.ಡಿ.ಸಿ. ಮಾಡಿದ ಉದ್ದೇಶ ಏನು? ಕೆ.ಹೆಚ್.ಡಿ.ಸಿ.ಯಲ್ಲಿ 14 ಸಾವಿರ ಹ್ಯಾಂಡ್‌ಲೂಮ್ ವೀವರ್ಸ್ ಇರುತ್ತಾರೆ. ಕೆ.ಹೆಚ್.ಡಿ.ಸಿ.ಯವರಿಗೆ ಇದುವರೆಗೆ ತಾವು ಆರ್ಡರ್ ಕೊಟ್ಟಿಲ್ಲ. ಮತ್ತು ಅಡ್ವಾನ್ಸ್ ಕೊಟ್ಟಿಲ್ಲ. ಇದರ ಜೊತೆಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಸ್ವಲ್ಪ ಆರ್ಡರ್ ಕೊಡುತ್ತಿದ್ದರು. ಈಗ ಅವರೂ ಸಹ ಖಾಸಗಿ ವ್ಯಕ್ತಿಗಳ ಸಂಸ್ಥೆಗೆ ಆರ್ಡರ್‌ನ್ನು ಕೊಡುತ್ತಿದ್ದಾರೆ. ಒಬ್ಬನೇ ಒಬ್ಬ ಇಡೀ ಸ್ಟೇಟ್‌ದ್ದು ಆರ್ಡರ್‌ನ್ನು ತೆಗೆದುಕೊಂಡಿದ್ದಾನೆ. ಅವನ ಹತ್ತಿರ ಇರುವುದು ಕೇವಲ 14 ಪವರ್ ಲೂಮ್ಸ್ ಹೀಗಿರುವಾಗ ಅವನು ಇಡೀ ಸ್ಟೇಟ್‌ಗೆ ಸಂಬಂಧಪಟ್ಟ ಆರ್ಡರ್‌ನ್ನು ಹೇಗೆ ಆರ್ಡರ್ ಸಪ್ಲೈ ಮಾಡುತ್ತಾರೆ? ನಾನು ಅದಕ್ಕೇ ಈ ಬಗ್ಗೆ ಸೆಪರೇಟ್ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ : ಶಿವಾನಂದ ಪಾಟೀಲ್‌ರವರೆ, ಅದಕ್ಕೆ ಬೇರೆ ಪ್ರಶ್ನೆ ಹಾಕಿ: ಉತ್ತರ ಒದಗಿಸುತ್ತೇನೆ.

ಶ್ರೀ ಶಿವಾನಂದ ಎಸ್.ಪಾಟೀಲ್ : ಇದು ರೆಲೆವೆಂಟ್ ಪ್ರಶ್ನೆಯೇ ಇದ್ದರೂ ನಾನು ಬೇರೆ ಪ್ರಶ್ನೆಯನ್ನು ಹಾಕಿ ಕೇಳುತ್ತೇನೆ. ಆದರೆ ಕೆ.ಹೆಚ್.ಡಿ.ಸಿ. ಮುಚ್ಚುವ ಹಾಗೆ ಆಗಬಾರದು. ರೇವಣ್ಣನವರೇ, ನಿಮ್ಮ ಕಾಲದಲ್ಲಿ ಕೆ.ಹೆಚ್.ಡಿ.ಸಿ. ಮುಚ್ಚುವ ಹಾಗೆ ಆಗಬಾರದು ಎಂದು ನಾನು ಹೇಳಬಯಸುತ್ತೇನೆ. 1987 ರಿಂದಲೂ ನಿಮಗೆ ಗೊತ್ತಿದೆ ಜನತಾ ಸೀರೆ, ಧೋತಿಯನ್ನು ಕೇಂದ್ರ ಸರ್ಕಾರ ಬಂದ್ ಮಾಡಿದ ಮೇಲೆ ಹೆಗಡೆಯವರು ಅದನ್ನು ಪ್ರಾರಂಭ ಮಾಡಿದರು. ಇವೊತ್ತು ಇಡೀ ಕೆ.ಹೆಚ್.ಡಿ.ಸಿ. ಮುಚ್ಚುವ ಸ್ಥಿತಿಗೆ ಬಂದಿದೆ.

ಶ್ರೀ ಹೆಚ್.ಎಂ. ರೇವಣ್ಣ : ತಮಗೂ ಗೊತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮದಲ್ಲಿ...

(ಗೊಂದಲ)

ಅಧ್ಯಕ್ಷರು : ಈ ರೀತಿ ಉಪ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾ ಹೋದರೆ ಪ್ರಶ್ನೋತ್ತರ ಬೆಳೆಯುತ್ತಲೇ ಹೋಗುತ್ತದೆ. ದಯವಿಟ್ಟು ಪಾಟೀಲರೆ, ನೀವು ಬೇರೆ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕಳುಹಿಸಿ.